5 ವರ್ಷಕಿಂತಲೂ ಮೇಲ್ಪಟ್ಟ ಅಧಿಕಾರಿಗಳ ವರ್ಗಾವಣೆ

468 (981) ಶ್ರೀ ಗುಂಡಪ್ಪ ವಕೀಲ್ (ಔರಾದ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್.ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಔರಾದ್ ತಾಲ್ಲೂಕಿನ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಉಪ ವಿಭಾಗಗಳಲ್ಲಿ ಕಿರಿಯ ಅಭಿಯಂತರರುಗಳು 5 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಒಂದೇ ಸ್ಥಳದಲ್ಲಿ ಕೆಲಸ ನಿರ್ವಹಿಸಿರುವ ಕಾರಣ, ಹಗರಣಗಳು ಹೆಚ್ಚಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಐದು ವರ್ಷಕ್ಕಿಂತ ಹೆಚ್ಚಿನ ಅವಧಿ ಮೀರಿ ಸೇವೆಯಲ್ಲಿರುವ ಕಿರಿಯ ಅಭಿಯಂತರರುಗಳಿಗೆ ವರ್ಗಾವಣೆ ಮಾಡಲಾಗುವುದೇ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

1. ಇಲ್ಲ.

2. ಈ ಭಾರಿ ಸಾರ್ವತ್ರಿಕ ವಾರ್ಗವಣೆ ಇಲ್ಲ. ನಿರ್ದಿಷ್ಟ ಪ್ರಕರಣಗಳಲ್ಲಿ ಮಾತ್ರ ಅಗತ್ಯವಿದ್ದಲ್ಲಿ ವರ್ಗಾವಣೆ ಮಾಡಲಾಗುತ್ತಿದೆ.

ಚಾಮರಾಜ ನಗರ ನೂತನ ಜಿಲ್ಲೆಯಲ್ಲಿ ಪ್ರಥಮ ದರ್ಜೆ ಕಾಲೇಜಿನ ಕೊರತೆ

470 (757) ಶ್ರೀ ಸಿ.ಗುರುಸ್ವಾಮಿ (ಚಾಮರಾಜನಗರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಚಾಮರಾಜನಗರ ನೂತನ ಜಿಲ್ಲೆಯಲ್ಲಿ ಸುಸಜ್ಜಿತವಾದ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು, ಹಾಗೂ ಕಟ್ಟಡಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

2. ಬಂದಿದ್ದರೆ, ಇದನ್ನು ಪರಿಹರಿಸಲು ಸರ್ಕಾರ ಯಾವಾಗ ಕ್ರಮ ತೆಗೆದುಕೊಳ್ಳುತ್ತೇದೆ?

ಡಾ।। ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು)

1. ಹೌದು.

2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡಗಳ ವಿಸ್ತರಣೆಗಾಗಿ ಹುಡ್ಕೊ ನೆರವಿನ ಯೋಜನೆ ರೂಪಿಸಿದ್ದು, ಹುಡ್ಕೋ ನೆರವು ದೊರೆತ ನಂತರ ಕಟ್ಟಡಗಳ ಕೊರತೆಯನ್ನು ನಿವಾರಿಸಲು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ / ಗ್ರಾಮ ಪಂಚಾಯತ್‌ಗಳಿಗೆ ನೀಡಿರುವ ಹಣ

472 (756) ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಲ್ಲಾ ವರ್ಗದಲ್ಲಿ ಖಾಲಿ ಇರುವ ಹುದ್ದೆಗಳ ವಿವರವನ್ನು ನೀಡುವುದು.

2. ಇವುಗಳನ್ನು ಭರ್ತಿಮಾಡುವ ಉದ್ದೇಶ ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1. ಬಂದಿದೆ - ಪಟ್ಟಿ ಲಗತ್ತಿಸಿದೆ.

2. ಬಂದಿದೆ-ಎಸ್.ಸಿ.ಎಸ್.ಟಿ. ಬ್ಯಾಕ್‌ಲಾಗ್‌ನಲ್ಲಿ ಅಯ್ಕೆಯಾಗಿರುವ ಶುಶ್ರೂಷಕಿಯರನ್ನು ನೇಮಕ ಮಾಡುವಾಗ ಹಾಗೂ ಪದೋನ್ನತಿ ನೀಡುವಾಗ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಖಾಲಿ ಇರುವ ವೈದ್ಯಾಧಿಕಾರಿಗಳು ಹುದ್ದೆಗಳನ್ನು ಕೂಡ ತುಂಬಲಾಗುವುದು. ಜಿಲ್ಲಾಧಿಕಾರಿಗಳಿಗೆ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ, ಗೌರವ ಧನದ ಆಧಾರದ ಮೇಲೆ ನಿವೃತ್ತಿ ಸರ್ಕಾರಿ ತಜ್ಞರನ್ನು ಹಾಗೂ ಖಾಸಗಿ ಸಮಾಲೋಚಕರನ್ನಾಗಿ ನೇಮಕ ಮಾಡುವ ಅಧಿಕಾರ ನೀಡಲಾಗಿದೆ. ವಿಶೇಷ ನೇರ ನೇಮಕಾತಿ ಮೂಲಕ ಖಾಲಿ ಇರುವ ಅರೆ ವೈದ್ಯಕೀಯ ಹುದ್ದೆಗಳಲ್ಲಿ ನೇಮಕಾತಿಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ದಿನಾಂಕ:30-6-2002ರಲ್ಲಿದ್ದಂತೆ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಮಂಜೂರಾಗಿರುವ, ಕರ್ತವ್ಯನಿರತ ಮತ್ತು ಖಾಲಿ ಹುದ್ದೆಗಳ ಹುದ್ದೆವಾರು ವಿವರ

ಕ್ರಮ	ಹುದ್ದೆಯ ಹೆಸರು	ಮಂಜೂರಾದ ಒಟ್ಟು ಹುದ್ದೆಗಳು	ಕರ್ತವ್ಯ ನಿರತ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ	ಷರಾ
1	2	3	4	5	6
1.	ಜಿಲ್ಲಾ ಶಸ್ತ್ರ ಚಿಕಿತ್ಸಕರು	1	1	-	ಜಿಲ್ಲಾ ಆಸ್ಪತ್ರೆ ಚಾಮರಾಜನಗರ
2.	ಹಿರಿಯ ತಜ್ಞರು	7	5	2	
3.	ಲೇ - ಕಾರ್ಯದರ್ಶಿ	1	-	1	
4.	ಕಛೇರಿ ಅಧೀಕ್ಷಕರು	1	-	1	
5.	ಪ್ರಥಮ ದರ್ಜೆ ಸಹಾಯಕರು	3	2	1	
6.	ದ್ವಿತೀಯ ದರ್ಜೆ ಸಹಾಯಕರು	1	1	-	ಯಾವುದೇ
7.	ಕ್ಷ - ಕಿರಣ ತಂತ್ರಜ್ಞರು	1	-	1	ಗುತ್ತಿಗೆ ವೈದ್ಯರನ್ನು
8.	ಹಿರಿಯ ಪ್ರಯೋಗಶಾಲಾ ತಂತ್ರಜ್ಞರು	1	-	1	ನೇಮಕ ಮಾಡಿರು
9.	ಕಿರಿಯ ಪ್ರಯೋಗಶಾಲಾ ತಂತ್ರಜ್ಞರು	3	-	3	ವುದಿಲ್ಲ.
10.	ನೇತ್ರ ಸಹಾಯಕರು	2	2	-	
11.	ಶಿಬಿರ ಸಂಯೋಜಕರು	1	-	1	
12.	ಫಿಜಿಯೋಥೆರಪಿಸ್ಟ್	1	1	-	
13.	ಹಿರಿಯ ಶುಶ್ರೂಷಕರು	2	0	2	
14.	ಶುಶ್ರೂಷಕರು	30	16	14	
15.	ಹಿರಿಯ (ಮ) ಆರೋಗ್ಯ ಸಹಾಯಕರು	1	-	1	

1	2	3	4	5	6
16.	ಕಿರಿಯ (ಮ) ಆರೋಗ್ಯ ಸಹಾಯಕರು	3	3	-	
17.	ಕಿರಿಯ (ಪು) ಆರೋಗ್ಯ ಸಹಾಯಕರು	2	-	2	
18.	ವಾಹನ ಚಾಲಕರು	4	3	1	
19.	ಕ್ಷ - ಕಿರಣ ಅಟೆಂಡರ್	1	1	-	
20.	ಲ್ಯಾಬ್ ಅಟೆಂಡರ್	2	1	1	
21.	'ಡಿ' ದರ್ಜಿ ನೌಕರರು	18	7	11	
22.	ಶುಶ್ರೂಷಾಧಿಕ್ಷಕರು ದರ್ಜೆ-2	1	1	-	
	ಒಟ್ಟು	87	44	43	

ಷರಾ: 1. ಫಾರ್ಮಸಿಸ್ಟ್ ಹುದ್ದೆ ಈ ಆಸ್ಪತ್ರೆಗೆ ಮಂಜೂರಾಗಿಲ್ಲ.

2. ಲೆಕ್ಕ ಶೀರ್ಷಿಕೆ:2210-06-101-8-03 ಜಿಲ್ಲಾ ಸಂಚಾರಿ ನೇತ್ರ ಘಟಕದಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೈದ್ಯರೊಬ್ಬರು ದಿನಾಂಕ:23-6-2001 ರಿಂದ ಅಮಾನತ್ತಿನಲ್ಲಿದ್ದಾರೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಜನಾಂಗದವರಿಗೆ ಸಂಘ ಸಂಸ್ಥೆಗಳಿಗೆ ಬಣ್ಣದ ದೂರದರ್ಶನ ಸೆಟ್ಟನ್ನು ನೀಡುತ್ತಿರುವುದು.

473 (760) ಶ್ರೀ ಗುರುಸ್ವಾಮಿ.ಸಿ. (ಚಾಮರಾಜನಗರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಜನಾಂಗದವರಿಗೆ ಸಂಘ ಸಂಸ್ಥೆಗಳಿಗೆ ಬಣ್ಣದ ದೂರದರ್ಶನ ಸೆಟ್ಟುಗಳನ್ನು ಎಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜನರು ಇರುವ ಶಾಸಕರ ಕ್ಷೇತ್ರಗಳಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಸಾಮಾನ್ಯ ಕ್ಷೇತ್ರದಲ್ಲಿಯೂ ಸಹ ಪರಿಶಿಷ್ಟ ಜಾತಿ : ಪರಿಶಿಷ್ಟ ಜನಾಂಗದವರು ಗಣನೀಯ ಸಂಖ್ಯೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಈ ಕ್ಷೇತ್ರಗಳಲ್ಲಿ ಆ ವರ್ಗದ ಜನರಿಗೆ ಬಣ್ಣದ ದೂರದರ್ಶನ ಸೆಟ್ಟುಗಳ ವಿತರಣೆಯಲ್ಲಿ ಸೌಲಭ್ಯ ಪಡೆಯಲು ವಂಚಿತರಾಗುವುದಿಲ್ಲವೆ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಹಾಗೂ ವಾರ್ತಾ ಸಚಿವರು):

1. ಹೌದು.

2. ಹೌದು.

1996-97ನೇ ಸಾಲಿನವರೆವಿಗೂ ವಿಶೇಷ ಘಟಕ ಯೋಜನೆಯಡಿ ಬಿಡುಗಡೆಯಾಗುತ್ತಿದ್ದ ಅನುದಾನದಲ್ಲಿ ಎಲ್ಲಾ ಶಾಸಕರ ಕ್ಷೇತ್ರದ ಪರಿಶಿಷ್ಟ ಜಾತಿ ಜನರ ಕಾಲೋನಿಗಳಲ್ಲಿ ದೂರದರ್ಶನ ಸೆಟ್ಟು ಅಳವಡಿಸಲಾಗುತ್ತಿತ್ತು. ಈ ಯೋಜನೆಯಡಿಯ ಅನುದಾನವನ್ನು ಸರ್ಕಾರದ ಮಟ್ಟದಲ್ಲಿ